# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1303 |
| ಸದಸ್ಯರ ಹೆಸರು | ಡಾ|| ಉಮಾಶ್ರೀ |
| ಉತ್ತರಿಸುವ ದಿನಾಂಕ | 17.12.2025 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

********

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎಷ್ಟು ಹಿಂದೂ ದೇವಾಲಯಗಳಿವೆ; ಈ ದೇವಾಲಯಗಳ ನಿರ್ವಹಣೆಗೆ ಹಣದ ಮೂಲ ಯಾವುದು; ಈ ದೇವಾಲಯಗಳಿಗೆ ಸರ್ಕಾರದಿಂದ ಅನುದಾನ ನೀಡಲಾಗಿರುತ್ತದೆಯೇ; (ವಿವರ ನೀಡುವುದು) | ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಟ್ಟ **ಒಟ್ಟು 34566** ಅಧಿಸೂಚಿತ ದೇವಸ್ಥಾನಗಳಿರುತ್ತವೆ.<br><br>1. ಆಯಾಯ ದೇವಾಲಯಗಳಲ್ಲಿ ಹುಂಡಿ ಹಣ/ ಕಾಣಿಕೆ/ ದೇಣಿಗೆ/ ಪುದುವಟ್ಟು/ ಮನಿಯಾರ್ಡರ್ ರೂಪದಲ್ಲಿ ಸಂಗ್ರಹವಾಗುವ ಹಣವೇ ಈ ದೇವಾಲಯಗಳ ನಿರ್ವಹಣೆಗೆ ಮೂಲವಾಗಿದೆ.<br>2. ಈ ದೇವಾಲಯಗಳಿಗೆ ಸರ್ಕಾರದಿಂದ ನೀಡಲಾಗುತ್ತಿರುವ ಅನುದಾನ ವಿವರ ಈ ಕೆಳಕಂಡಂತಿದೆ:<br><br>i. **ದುರಸ್ಥಿ / ಜೀರ್ಣೋದ್ಧಾರ / ನಿರ್ಮಾಣ:-** ದೇವಸ್ಥಾನ ಮತ್ತು ಇತರೆ ಧಾರ್ಮಿಕ ಸಂಸ್ಥೆಗಳ ದುರಸ್ಥಿ/ ಜೀರ್ಣೋದ್ಧಾರ/ ನಿರ್ಮಾಣಕ್ಕಾಗಿ ಆಯವ್ಯಯದಲ್ಲಿ ಯೋಜನೇತರ ಲೆಕ್ಕ ಶೀರ್ಷಿಕೆ ಅಡಿ ಅನುದಾನ ಮಂಜೂರು ಮಾಡಲಾಗುತ್ತಿದೆ.<br>ii. **ಧಾರ್ಮಿಕ ಸ್ಥಳಗಳಲ್ಲಿ ಮೂಲಭೂತ ಸೌಕರ್ಯ ಮತ್ತು ವಸತಿ ಸೌಕರ್ಯ:-** ಧಾರ್ಮಿಕ ಸ್ಥಳಗಳಲ್ಲಿ ಮೂಲಭೂತ ಸೌಕರ್ಯ ಮತ್ತು ವಸತಿ ಸೌಕರ್ಯಗಳನ್ನು ಒದಗಿಸಲು 2010-11ನೇ ಸಾಲಿನಿಂದ ಸರ್ಕಾರವು ಧಾರ್ಮಿಕ ದತ್ತಿ ಇಲಾಖೆಗೆ ಅನುದಾನವನ್ನು ಮಂಜೂರು ಮಾಡಲಾಗುತ್ತಿದೆ.<br>iii. **ಆರಾಧನಾ ಯೋಜನೆ:-** 1991-92ನೇ ಸಾಲಿನಿಂದ ಆರಾಧನಾ ಯೋಜನೆಯು ಜಾರಿಗೆ ಬಂದಿದ್ದು, ಈ ಯೋಜನೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ಮತ್ತು ಹಿಂದುಳಿದ ಪಂಗಡದವರು ಹಾಗೂ ಅಲ್ಪ ಸಂಖ್ಯಾತರು ವಾಸಿಸುವ ಸ್ಥಳಗಳಲ್ಲಿ ಪ್ರಾರ್ಥನಾ ಮಂದಿರ, ಪೂಜಾ ಮಂದಿರ ನಿರ್ಮಿಸಲು ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆ. ಈ ಯೋಜನೆಯ ಅನುದಾನ ಕುರಿತಂತೆ ಸರ್ಕಾರವು ಪ್ರತ್ಯೇಕ ಮಾರ್ಗಸೂಚಿಯನ್ನು ಸಹ ಹೊರಡಿಸಿರುತ್ತದೆ.<br>iv. **ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ:-** ಈ ಯೋಜನೆಗಳು 2011-12ನೇ ಸಾಲಿನಿಂದ ಜಾರಿಗೆ ಬಂದಿರುತ್ತದೆ. ವಿಶೇಷ ಘಟಕ |

| | ಪ್ರಶ್ನೆ | ಉತ್ತರ |
|---|---|---|
| | | ಯೋಜನೆಯಡಿ ಪರಿಶಿಷ್ಟ ಜಾತಿಯ ಜನಾಂಗದವರು ಮತ್ತು ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಪಂಗಡದವರು ವಾಸಿಸುವ ಸ್ಥಳಗಳಲ್ಲಿನ ದೇವಾಲಯದ ಜೀರ್ಣೋದ್ಧಾರ/ ನವನಿರ್ಮಾಣ ಅಥವಾ ಸಮುದಾಯ ಭವನ/ ಕಲ್ಯಾಣ ಮಂಟಪ ಜೀರ್ಣೋದ್ಧಾರ /ನವನಿರ್ಮಾಣಗಳಿಗೆ ಸರ್ಕಾರವು ಧನ ಸಹಾಯ ನೀಡುತ್ತಿದೆ.<br>v. **ತಸ್ತೀಕ್ ಅನುದಾನ:-** ಕರ್ನಾಟಕ (ಮತೀಯ ಮತ್ತು ಧರ್ಮಾದಾಯ) ಇನಾಂ ರದ್ದಿಯಾತಿ ಕಾಯ್ದೆ 1955 ರನ್ವಯ ಧರ್ಮಾದಾಯ/ಧಾರ್ಮಿಕ ಸಂಸ್ಥೆಗಳು ಹೊಂದಿದ್ದ ಇನಾಂ ಜಮೀನುಗಳು ದಿನಾಂಕ 01.07.1970 ರಿಂದ ಸರ್ಕಾರದಲ್ಲಿ ವಿಹಿತಗೊಂಡಿರುವುದಕ್ಕೆ ಪರಿಹಾರಾರ್ಥವಾಗಿ ಅದೇ ದಿನಾಂಕದಿಂದ ಜಾರಿಗೆ ಬರುವಂತೆ ತಸ್ತೀಕ್ ಮೊತ್ತವನ್ನು ನಿಗಧಿಪಡಿಸಲಾಗಿರುತ್ತದೆ. ವಾರ್ಷಿಕ ತಸ್ತೀಕ್ ಮೊತ್ತವನ್ನು 2015-16ನೇ ಸಾಲಿನಿಂದ ಜಾರಿಗೆ ಬರುವಂತೆ ರೂ.36,000/-ಗಳಿಗೆ, 2017-18ನೇ ಸಾಲಿನಿಂದ ಜಾರಿಗೆ ಬರುವಂತೆ ರೂ.48,000/-ಗಳಿಗೆ, 2022-23ನೇ ಸಾಲಿನಿಂದ ಜಾರಿಗೆ ಬರುವಂತೆ ರೂ.60,000/- ಗಳಿಗೆ ಹಾಗೂ 2025-26ನೇ ಸಾಲಿನಿಂದ ಜಾರಿಗೆ ಬರುವಂತೆ ರೂ.72,000/- ಗಳಿಗೆ ನಿಗಧಿಪಡಿಸಲಾಗಿದೆ.<br>vi. **ವರ್ಷಾಸನ ಅನುದಾನ:-** ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ರನ್ವಯ ವರ್ಷಾಸನ ನಿಗಧಿಪಡಿಸಿರುವ ದೇವಸ್ಥಾನ ಮತ್ತು ಇತರೆ ಧಾರ್ಮಿಕ ಸಂಸ್ಥೆಗಳಿಗೆ ವರ್ಷಾಸನ ಮೊತ್ತವನ್ನು ಪಾವತಿಸಲಾಗುತ್ತಿದೆ. ವಾರ್ಷಿಕ ವರ್ಷಾಸನ ಮೊತ್ತವನ್ನು 2018-19ನೇ ಸಾಲಿನಿಂದ ಜಾರಿಗೆ ಬರುವಂತೆ ರೂ.48,000/-ಗಳಿಗೆ, 2023-24ನೇ ಸಾಲಿನಿಂದ ಜಾರಿಗೆ ಬರುವಂತೆ ರೂ.60,000/-ಗಳಿಗೆ ಹಾಗೂ 2025-26ನೇ ಸಾಲಿನಿಂದ ಜಾರಿಗೆ ಬರುವಂತೆ ರೂ.72,000/-ಗಳಿಗೆ ನಿಗಧಿಪಡಿಸಲಾಗಿದೆ. |
| ಆ) | ರಾಜ್ಯದಲ್ಲಿ ಹಿಂದೂ ದೇವಾಲಯಗಳಲ್ಲಿ ಇರುವ ಪುರೋಹಿತರ ಸಂಖ್ಯೆ ಎಷ್ಟು; ಪ್ರತಿ ಪುರೋಹಿತರಿಗೂ ಸರ್ಕಾರ ನಿಗಧಿ ಮಾಡಿರುವ ವೇತನ ಅಥವಾ ಗೌರವ ಧನ ಎಷ್ಟು; ಈ ವೇತನ ಅಥವಾ ಗೌರವಧನವನ್ನು ದೇವಾಲಯಗಳಲ್ಲಿ ಕಾರ್ಯನಿರ್ವಹಿಸುವ ಪುರೋಹಿತರಿಗೆ ಸರ್ಕಾರದಿಂದಲೇ ನೀಡಲಾಗುತ್ತಿದೆಯೇ; | 1. ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಟ್ಟ ಅಧಿಸೂಚಿತ ದೇವಸ್ಥಾನಗಳಲ್ಲಿ **ಒಟ್ಟು 31,831** ಅರ್ಚಕರು/ ಸಹಾಯಕ ಅರ್ಚಕರು ಸೇವೆ ಸಲ್ಲಿಸುತ್ತಿದ್ದಾರೆ.<br>2. ಕರ್ನಾಟಕ ಹಿಂದೂ ಧಾಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮ 2022ರ ನಿಯಮ 8(2)(i)ರಂತೆ ಅರ್ಚಕರಿಗೆ ತಟ್ಟೆಕಾಸು ಪಡೆಯುವ ಪದ್ಧತಿ ಇಲ್ಲದೇ ಇರುವ ದೇವಾಲಯಗಳಲ್ಲಿ ಅಥವಾ ತಟ್ಟೆಕಾಸು, ರೊಕ್ಕವೆಚ್ಚ ಅಥವಾ ಸೇವಾ ಕಮಿಷನ್ ಪಡೆಯಲು ನಿರಾಕರಿಸುವ ಅರ್ಚಕರು ವೇತನ ಶ್ರೇಣಿಯನ್ನು ಪಡೆಯಲು ಇಚ್ಛಿಸಿದಲ್ಲಿ ಅಂತಹ ಅರ್ಚಕರ ಹುದ್ದೆ ಮತ್ತು ದೇವಾಲಯ ಆದಾಯಕ್ಕೆ ಅನುಗುಣವಾಗಿ ವೇತನ ಶ್ರೇಣಿಯನ್ನು ನೀಡಲಾಗುವುದು. |

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>3. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು, 2002ರ ನಿಯಮ 12ರಂತೆ, ನೇಮಕವಾಗುವ ಅರ್ಚಕರಿಗೆ ನಿಯಮ 8(2)(i)ರಲ್ಲಿ ನಿಗಧಿಪಡಿಸಲಾದಂತೆ ಪ್ರವರ್ಗ 'ಎ' ದೇವಾಲಯದ ಅರ್ಚಕರ ವೇತನ ಶ್ರೇಣಿ ರೂ.11,600-24,600/- ಮತ್ತು ಪ್ರವರ್ಗ 'ಬಿ' ದೇವಾಲಯದ ಅರ್ಚಕರ ವೇತನ ಶ್ರೇಣಿ ರೂ.7,275-17,250/-ಗಳಂತೆ ವೇತನ ಶ್ರೇಣಿಯನ್ನು ನಿಗಧಿಪಡಿಸಿ, ನಿಯಮಾನುಸಾರ ಮಾಸಿಕ ವೇತನವನ್ನು ಪಾವತಿಸಲಾಗುತ್ತದೆ.<br><br>4. 'ಸಿ' ವರ್ಗದ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರಿಗೆ ವಾರ್ಷಿಕ ರೂ.72,000/-ಗಳ ತಸ್ತೀಕ್ ಮೊತ್ತವನ್ನು ನೀಡಲಾಗುತ್ತಿದೆ.<br><br>5. 'ಸಿ' ವರ್ಗದ ಕೆಲವು ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರಿಗೆ ವಾರ್ಷಿಕ ರೂ.72,000/-ಗಳ ವರ್ಷಾಸನ ನೀಡಲಾಗುತ್ತಿದೆ.</td></tr>
<tr><td>ಇ)</td><td>ಹಿಂದೂ ದೇವಾಲಯಗಳನ್ನು ಆರ್ಥಿಕ ಆಧಾರದ ಮೇಲೆ ವರ್ಗೀಕರಿಸಲಾಗಿದೆಯೇ; ವರ್ಗೀಕರಿಸಿದ್ದಲ್ಲಿ ರಾಜ್ಯದಲ್ಲಿ ಎಲ್ಲಾ ವರ್ಗೀಕೃತ ದೇವಾಲಯಗಳ ಪಟ್ಟಿ ನೀಡುವುದು;</td><td>ಧಾರ್ಮಿಕ ದತ್ತಿ ಇಲಾಖಾ ದೇವಸ್ಥಾನಗಳನ್ನು ಆಯಾ ದೇವಾಲಯಗಳ ಆದಾಯಕ್ಕೆ ಅನುಗುಣವಾಗಿ ಪ್ರವರ್ಗ 'ಎ' 'ಬಿ' ಮತ್ತು 'ಸಿ' ದೇವಾಲಯಗಳೆಂದು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ:
<table>
<tr><th>ಪ್ರ ವರ್ಗ</th><th>ವಿವರ</th><th>ಸಂಸ್ಥೆಗಳ ಸಂಖ್ಯೆ</th></tr>
<tr><td>ಎ</td><td>ವಾರ್ಷಿಕ ವರಮಾನವು ರೂ. ಇಪ್ಪತ್ತೈದು ಲಕ್ಷಗಳನ್ನು ಮೀರಿದ ಸಂಸ್ಥೆಗಳು</td><td>205</td></tr>
<tr><td>ಬಿ</td><td>ವಾರ್ಷಿಕ ವರಮಾನವು ರೂ. ಐದು ಲಕ್ಷಗಳನ್ನು ಮೀರಿ ರೂ. ಇಪ್ಪತ್ತೈದು ಲಕ್ಷಗಳನ್ನು ಮೀರದ ಸಂಸ್ಥೆಗಳು</td><td>193</td></tr>
<tr><td>ಸಿ</td><td>ವಾರ್ಷಿಕ ವರಮಾನವು ರೂ. ಐದು ಲಕ್ಷಗಳನ್ನು ಮೀರದ ಸಂಸ್ಥೆಗಳು</td><td>34168</td></tr>
<tr><td colspan="2">ಒಟ್ಟು</td><td>34,566</td></tr>
</table>
ರಾಜ್ಯದಲ್ಲಿನ ಧಾರ್ಮಿಕ ದತ್ತಿ ಇಲಾಖೆಯ ಅಧಿಸೂಚಿತ ಎಲ್ಲಾ ವರ್ಗೀಕೃತ ದೇವಾಲಯಗಳ ಪಟ್ಟಿಯನ್ನು E-mail ಮೂಲಕ ಮಾನ್ಯ ಶಾಸಕರ ಇ-ಮೇಲ್ iumashree@gmail.com ವಿಳಾಸಕ್ಕೆ ದಿನಾಂಕ:10.12.2025ರಂದು ಕಳುಹಿಸಲಾಗಿರುತ್ತದೆ.</td></tr>
</table>

ಸಂಖ್ಯೆ: ಕಂಇ 221 ಮುಸಪ್ರ 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು